<u>ಸಾಕ್ಷಿಯನ್ನು ದಿನಾಂಕ 27-12-2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>
<u>ಪಾಟೀ ಸವಾಲುಃ- ಆರೋಪಿ ಪರ ಶ್ರೀ ಎಂ.ಆರ್ ಎಸ್ ವಕೀಲರಿಂದ</u>

ಶಶಿರೇಖಾ ನನ್ನ ಅತ್ತೆ. ಆಕೆ ಅನೇಕ ಚೆಕ್ ಪ್ರಕರಣ ಹೂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನ್ನ ಮತ್ತು ಶಶಿರೇಖಾ ರವರು ಮನೆ ಗಾಂಧಿನಗರದಲ್ಲಿ ಇರುತ್ತದೆ ಎಂದರೆ ಸರಿ. 2022 ರಲ್ಲಿ ಶಶಿರೇಖಾ ರವರಿಗೆ ಸೇರಿದ ಬ್ಯಾಂಕ್ ಖಾತೆ ಮತ್ತು ಮೊಬೈಲ್ ನಂಬರ್ ಇರಲಿಲ್ಲ ಎಂದರೆ ಸಾಕ್ಷಿ ಇರಬಹುದು ಎಂದು ಉತ್ತರಿಸುತ್ತಾರೆ. ನನ್ನ ಅತ್ತೆಯ ಮೆಬೈಲ್ ಸಂಖ್ಯೆ 8431741790 ಆಗಿದೆ ಎಂದರೆ ಸರಿ. ನನ್ನ ಅತ್ತೆ ಆರೋಪಿಗೆ 2022 ರಲ್ಲಿ ಹಂತ ಹಂತ ವಾಗಿ 65 ಸಾವಿರ ಸಾಲ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 2022 ರಲ್ಲಿ ನನ್ನ ಬಳಿ ಮೊಬೈಲ್ ಇತ್ತು ಎಂದರೆ ಸರಿ. ನನ್ನ ಫೋನ್ ನಂಬರ್ 9901746305 ಆಗಿರುತ್ತದೆ. ಏಪ್ರಿಲ್ 2023 ರಲ್ಲಿ ಆರೋಪಿಯಿಂದ 65 ಸಾವಿರ ಹಣ ವಸೂಲಿ ಮಾಡಲು ನನಗೆ ಹೇಳಿರುತ್ತಾರೆ ಎಂದರೆ ಸರಿಯಲ್ಲ. 1,47,000/- ಹಣವನ್ನು ನನ್ನ ಅತ್ತೆಗೆ ಆರೋಪಿ ಆರ್ ಟಿ ಜಿ ಎಸ್ ಮುಖಾಂತರ ಮರುಪಾವತಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಹಣ ಪಡೆದಾಗ ನನ್ನ ಅತ್ತೆ ಆರೋಪಿಗೆ ಸಂಬಂದಪಟ್ಟ ಎಸ್ ಬಿ ಐ ಬ್ಯಾಂಕಿನ 5 ಸಹಿ ಇದ್ದ ಖಾಲಿ ಚೆಕ್ಕುಗಳನ್ನು ಪಡೆದಿರುತ್ತಾರೆ ಮತ್ತು ನಾನು ಸಹ ಹಾಜರಿದ್ದೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. 2023 ನೇ ಇಸವಿಯಲ್ಲಿ ಸದರಿ ಚೆಕ್ಕುಗಳನ್ನು ಆರೋಪಿ ಹಿಂದಿರುಗಿಸಲು ಕೇಳಿರುತ್ತಾರೆ ಎಂದರೆ ನನಗೆ ಗುೌತ್ತಿಲ್ಲ.

ನನ್ನ ಮತ್ತು ನನ್ನ ಅತ್ತೆ ನಡುವೆ ಭಿನ್ನಾಬಿಪ್ರಾಯ ಇಲ್ಲ ಎಂದರೆ ಸರಿ. ನಾನು 10 ನೇ ತರಗತಿ ವರೆಗೆ ಓದಿರುತ್ತೇನೆ. ತಿಳಿವಳಿಕೆ ನೋಟೀಸಿಗೆ ಮಾಹಿತಿ ನಾನೇ ನೀಡಿರುತ್ತೇನೆ. ನಿಪಿ-3 ರಲ್ಲಿ ನಾನು ನನ್ನ ಉದ್ಯೋಗದ ಬಗ್ಗೆ ತಿಳಿಸಿರುವುದಿಲ್ಲ ಎಂದರೆ ಸರಿ. ನಾನು ಏನು ಕೆಲಸ ಮಾಡುತ್ತೇನೆ ಎಂದು ನನ್ನ ವಕೀಲರಿಗೆ ನಾನು ಹೇಳಿರುವುದಿಲ್ಲ. 2,50,000/- ಯಾವ ಮೂಲದಿಂದ ಬಂತು ಎಂದು ನಾನು ನಿಪಿ-3 ರಲ್ಲಿ ತಿಳಿಸಿರುವುದಿಲ್ಲ .

ನನಗೆ ಆರೋಪಿ ಸುಮಾರು 5-6 ವರ್ಷಗಳಿಂದ ಪರಿಚಿತರು. ಆರೋಪಿ ನಮ್ಮ ಮನೆಗೆ ಬಂದು ಹೋಗುತ್ತಿದ್ದರು ಮತ್ತು ಸಂಘ ಸಂಸ್ಥೆಯಲ್ಲಿ ಗುರುತಿಸಿಕೊಂಡಿದ್ದರು. ನಾನು

ಯಾವುದೇ ಚೀಟಿ ವ್ಯವಹಾರ ಮಾಡಿರುವುದಿಲ್ಲ. ಬಸವರಾಜ ಎನ್ನುವವರ ಮೇಲೆ ನನ್ನ ಚೀಟಿ ವ್ಯವಹಾರಕ್ಕೆ ಸಬಂದಪಟ್ಟಂತೆ ನನ್ನ ಅತ್ತೆ ಚೆಕ್ ಪ್ರಕರಣ ಹೂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವೆರದು ನಾನುಚೀಟಿ ನಡೆಸುವುದಿಲ್ಲ ಎಂದು ಉತ್ತರಿಸುತ್ತಾರೆ.

ನಾನು ಹಣ ನೀಡುವ ಒಂದು ವಾರ ಪೂರ್ವದಲ್ಲಿ ಹಣ ಬೇಕು ಎಂದು ಬೇಡಿಕೆ ಇಟ್ಟಿರುತ್ತಾರೆ. ಆರೋಪಿ ಹಣ ಕೇಳಿದ ದಿನವೇ ಹಣ ನೀಡಲು ಹಣ ನನ್ನ ಬಳಿ ಇರುವುದಿಲ್ಲ. ಸಾಮಾನ್ಯವಾಗಿ ಹಣ ಕಾಸಿನ ವ್ಯವಹಾರ ಮಾಡಲು ದಾಖಲೆ ಪಡಯುತ್ತೇವೆ ಎಂದರೆ ಸರಿ. ನಾನು ಯಾವುದೇ ದಾಖಲೆಗಳನ್ನು ಆರೋಪಿಯಿಂದ ಕೇಳಿರುವುದಿಲ್ಲ. ನಾನು ಸಂಜೆ 5 ಗಂಟೆಗೆ ಹಣ ಆರೂಪಿಗೆ ನೀಡಿರುತ್ತೇನೆ. ಹಣ ಕೊಡಬೇಕಾದರೆ ಆರೋಪಿಯ ಜೊತೆ ಯಾರು ಬಂದಿರುವುದಿಲ್ಲ. ಹಣವನ್ನು ನಾನು ನನ್ನ ಮನೆಯಲ್ಲಿ ನೀಡಿರುತ್ತೇನೆ. ಆರೋಪಿಯ ಮಗ ಜಾತ್ರೆಯಲ್ಲಿ ಆಟ ಆಡುವ ಯಂತ್ರಗಳನ್ನು ನಾನು ಸಹ ಅದರಲ್ಲಿ ಪಾಲುದಾರನಾಗಿರುತ್ತೇನೆ ಎಂದರೆ ಸರಿಯಲ್ಲ. ಹಣ ಕೊಡುವಾಗ ಯಾವುದೇ ಬರವಣಿಗೆ ಆಗಿರುವುದಿಲ್ಲ. ಹಣ ನೀಡಿದ್ದಕ್ಕಾಗಿ ಆರೋಪಿಯಿಂದ ಯಾವುದೇ ದಾಖಲೆ ಪಡೆದಿರುವುದಿಲ್ಲ.

ರೂ.2,50,000/- ಹಣ ದೂಡ್ಡ ಮೊತ್ತ ಎಂದರೆ ಸರಿ ಮತ್ತು ಯಾವುದೇ ಬಡ್ಡಿಗೆ ಮಾತುಕತೆ ಆಗಿರುವುದಿಲ್ಲ. ನನಗೆ ಸ್ವಂತ ಗಾಡಿ ಇದೆ ಹಾಗೂ ನಾನು ಲೆ ಔಟ್ ಸಹ ಮಾಡಿ ಮಾರಾಟ ಮಾಡುತ್ತೇನೆ. ನನಗೆ ಬ್ಯಾಂಕ್ ನ ವ್ಯವಹಾರ ತಿಳಿದಿರುತ್ತದೆ. ಆರೋಪಿಗೆ ಬ್ಯಾಂಕ್ ಮುಖಾಂತರ ಹಣ ನೀಡಲು ತೂಂದರೆ ಇರಲಿಲ್ಲ ಆದರೆ ಆರೋಪಿ ಖಾತೆ ಸಮಸ್ಯ ಇರುತ್ತದೆ ಎಂದು ನಗದಾಗಿ ಕೇಳಿರುತ್ತಾರೆ. ಆರೋಪಿಯ ಖಾತೆಯ ಸಮಸ್ಯ ಇರುವುದಿಲ್ಲ ಎಂದರೆ ಗೊತ್ತಿಲ್ಲ. 2023 ನೇ ಇಸವಿಯಲ್ಲಿ ಕೆನರಾ ಬ್ಯಾಂಕ್ ಅಲ್ಲಿ ಖಾತೆ ಹೋಂದಿರುತ್ತೇನೆ. ನಾನು ಬ್ಯಾಂಕಿನಲ್ಲಿ ಹಣ ಹಾಕಿ ತೆಗೆಯುತ್ತಿದ್ದೆ ಎಂದರೆ ಸರಿ. ದಿಃ07.01.2023 ರಲ್ಲಿ ನನ್ನ ಖಾತೆಯಲ್ಲಿ ರೂ.2,50,000/- ಹಣ ಇತ್ತು. ಸದರಿ ವರ್ಷ ನನಗೆ ಚೆಕ್ ಬುಕ್ ಇತ್ತು ಎಂದರೆ ಸರಿ.

**C.C 2427 /2025**
**P.W.-1**

<u>ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.)

(ಓದಿ ಹೇಳಿ ಕೇಳಿ ಸರಿ ಇದೆ ಎಂದು ಒಪ್ಪಿರುತ್ತಾರೆ.)

ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಸಾಗರ.